## ಸುಧಾರಣೆ ತನ್ನಿ..

ಕೆಲವು ತಿಂಗಳುಗಳಿಂದ ಗಮನಿಸಿದಂತೆ ಕನ್ನಡದ ಬಹುತೇಕ ಚಾನೆಲ್‌ಗಳಲ್ಲಿ ಹಾಸ್ಯ ಕಾರ್ಯಕ್ರಮಗಳು, ಕೀಳು ಮಟ್ಟದ ಧಾರಾವಾಹಿಗಳು ಪ್ರಸಾರವಾಗುತ್ತಿವೆ. 'ಮಜಾ ಟಾಕೀಸ್', 'ಕಾಮಿಡಿ ಕಿಲಾಡಿಗಳು' ಮತ್ತು ರಾತ್ರಿ 10.30ರ ನಂತರ ಪ್ರಸಾರವಾಗುವ ಕ್ರೈಂ ಕಾರ್ಯಕ್ರಮಗಳನ್ನು ವೀಕ್ಷಿಸುವಾಗ ಮುಜುಗರವಾಗುತ್ತದೆ. ದ್ವಂದ್ವಾರ್ಥ ಕೊಡುವ ಮಾತುಗಳು, ಅಶ್ಲೀಲ ದೃಶ್ಯಗಳು, ಕಲಾವಿದರ ಆಂಗಿಕ ಹಾವಭಾವಗಳು ನೋಡಲು ಕಿರಿಕಿರಿ ಎನಿಸುತ್ತದೆ. ದಯವಿಟ್ಟು ಎಲ್ಲಾ ಕನ್ನಡ ಚಾನೆಲ್‌ನವರು ಈ ನಿಟ್ಟಿನಲ್ಲಿ ಸುಧಾರಣೆ ತರುವತ್ತ ಗಮನ ಹರಿಸಲಿ.

-ಕೆ.ಎಲ್.ಬಾಬು, ಬೀರೂರು

## ಅನುಕರಣೆ ಬೇಡ

'ಸ್ಟಾರ್ ಸುವರ್ಣ' ವಾಹಿನಿಯಲ್ಲಿ 'ಕನ್ನಡದ ಕೋಟ್ಯಧಿಪತಿ' ಕಾರ್ಯಕ್ರಮವನ್ನು ನಟ, ನಿರ್ದೇಶಕ ರಮೇಶ್ ಅರವಿಂದ್ ನಡೆಸಿಕೊಡುತ್ತಿದ್ದಾರೆ. ಅವರ ಹಾವ–ಭಾವ, ನಿರೂಪಣೆ ಎಲ್ಲವೂ 'ಕೌನ್ ಬನೇಗಾ ಕರೋಡ್‌ಪತಿ' ನಡೆಸಿಕೊಟ್ಟ ಹಿಂದಿಯ ಜನಪ್ರಿಯ ನಟ ಅಮಿತಾಬ್ ಬಚ್ಚನ್ ಅವರನ್ನು ಅನುಕರಣೆ ಮಾಡಿದಂತಿದೆ.

ಇದರಲ್ಲಿ ರಮೇಶ್‌ರವರ ಸ್ವಂತಿಕೆ (ಅವರು ಹಿಂದೆ ಝೀ ವಾಹಿನಿಯಲ್ಲಿ ನಡೆಸಿಕೊಟ್ಟಿದ್ದ 'ವೀಕ್ ಎಂಡ್ ವಿತ್ ರಮೇಶ್') ಇಲ್ಲ ಎನಿಸುತ್ತದೆ. ಅವರು ತಮ್ಮ ಎಂದಿನ ಶೈಲಿಯನ್ನು ಪ್ರದರ್ಶಿಸಿದರೆ ಒಳಿತು ಎನ್ನುವುದು ನನ್ನ ಅನಿಸಿಕೆ.

-ಸುಂದರ್, ಬೆಂಗಳೂರು

ವಾರದ ಪತ್ರ

## ಭಾಷಾ ಶುದ್ಧಿ ಎಕಿಲ್ಲ?

ಹಳೆಯ ಮೈಸೂರು ಭಾಗದ ಜನರು ಅಲ್ಪಪ್ರಾಣದ ವಿಷಯದಲ್ಲಿ ಯಾಕೆ ಎಡವುತ್ತಾರೆ ಎಂಬುದು ಗೊತ್ತಿಲ್ಲ. ಮಹಾಪ್ರಾಣ ಬಳಸಬೇಕಾದ ಕಡೆಗಳಲ್ಲೆಲ್ಲ ಅಲ್ಪ ಪ್ರಾಣವನ್ನೇ ಬಳಸುತ್ತಾರೆ. ವಿವಿಧ ಚಾನೆಲ್‌ಗಳಲ್ಲಿ ಪ್ರಸಾರವಾಗುವ ಕನ್ನಡ ಧಾರಾವಾಹಿಗಳಲ್ಲಿ ನಟಿಸುವ ಆ ಪ್ರದೇಶದ ಬಹುತೇಕ ಕಲಾವಿದರು ಮಹಾಪ್ರಾಣ ಬಳಸುವ ಕಡೆಗಳಲ್ಲೆಲ್ಲ ಅಲ್ಪಪ್ರಾಣವನ್ನೇ ಬಳಸುತ್ತಾರೆ. ಭಾವ ಎನ್ನಬೇಕಾದಲ್ಲಿ ಬಾವ, ಭಾವನೆ ಎನ್ನಬೇಕಾದಲ್ಲಿ ಬಾವನೆ, ಭರವಸೆ ಎನ್ನಬೇಕಾದಲ್ಲಿ ಬರವಸೆ, ಭಯ ಎನ್ನಬೇಕಾದಲ್ಲಿ ಬಯ... ಹೀಗೆ ಈ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಇಷ್ಟೇ ಅಲ್ಲ, ಅ ಕಾರಕ್ಕೆ ಹ ಕಾರ ಬಳಸುವುದು 'ಹ' ಕಾರಕ್ಕೆ ಅ ಕಾರ ಬಳಸುವುದು ಕೂಡ ಉಚ್ಚಾರಣೆಯಲ್ಲಿ ಸರ್ವೇ ಸಾಮಾನ್ಯ. ಹಕ್ಕಿ ಅಕ್ಕಿ ಆದರೆ, ಅಕ್ಕಿ ಹಕ್ಕಿಯಾಗುತ್ತದೆ. ಅರಿಷಿಣ ಹರಿಷಿಣವಾದರೆ, ಹಾಲು ಆಲು ಆಗುತ್ತದೆ. ಹಪ್ಪಳ ಅಪ್ಪಳವಾಗುತ್ತದೆ. ಕನ್ನಡದಲ್ಲಿ ಪ್ರತಿಯೊಂದು ವರ್ಣಕ್ಕೂ ತನ್ನದೇ ಆದ ಧ್ವನಿಯಿದೆ. ಒಂದು ಧ್ವನಿಗೆ ಬದಲಾಗಿ ಇನ್ನೊಂದು ಧ್ವನಿಯನ್ನು ಬಳಸಿದರೆ ಅಪಾರ್ಥ ಉಂಟಾಗುತ್ತದೆ. ಆದರ ಹಾದರವಾಗಿ, ಧನ ದನ ಆದರೆ ಅಪಾರ್ಥ ಉಂಟಾಗುವುದಿಲ್ಲವೆ? ಭಾಷಾ ಶುದ್ಧಿಯ ದೃಷ್ಟಿಯಿಂದ ಇದು ಅಪಚಾರವೇ ಸರಿ. ಕರ್ನಾಟಕದ ಮನೆ ಮನೆಗಳಲ್ಲಿ ವೀಕ್ಷಿಸುವ ನಮ್ಮ ಧಾರಾವಾಹಿಗಳಲ್ಲಿ ಭಾಷಾ ಶುದ್ಧಿ ಬೇಡವೆ? ಈ ತಪ್ಪು ಬಳಕೆ ಹೀಗೆಯೇ ಮುಂದುವರೆಯಬೇಕೇ? ಪ್ರಯತ್ನ ಪಟ್ಟು ಇದನ್ನು ಸುಧಾರಿಸಿಕೊಳ್ಳಲು ಸಾಧ್ಯವಿಲ್ಲವೆ?

-ಮುರಲೀಧರ ಕುಲಕರ್ಣಿ, ಬೀದರ್

## ಈ ಹಾಡಿನ ನೀತಿ ಗೊತ್ತಿಲ್ಲವೇ?

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಡಿಕೆಡಿ ಲಿಟ್ಲ್ ಮಾಸ್ಟರ್' ಮಕ್ಕಳ ಡ್ಯಾನ್ಸ್ ರಿಯಾಲಿಟಿ ಶೋನಲ್ಲಿ ವಂಶಿ ಮತ್ತು ಅಭಿಜಾತ್ ಭಟ್ 'ಧರಣಿ ಮಂಡಲ ಮಧ್ಯದೊಳಗೆ' ಪುಣ್ಯಕೋಟಿ ಗೋವಿನ ಹಾಡಿಗೆ ನೃತ್ಯ ಮಾಡಿದರು. ಆ ಪ್ರಸಂಗ ಯಾವಾಗ ಓದಿದರೂ, ಹಾಡು ಕೇಳಿದರೂ ಅಂತ್ಯದಲ್ಲಿ ಗೋವಿನ ಸತ್ಯಸಂಧತೆಯನ್ನು ನೆನೆಯುವಾಗ ಕಣ್ಣಂಚಲ್ಲಿ ಕಂಬನಿ ಇಣುಕುತ್ತದೆ. ಅಂತಹ ಹಾಡಿನ ಕುರಿತು ಕೆಲವು ಮಕ್ಕಳನ್ನು ಮತ್ತು ಅವರ ಪೋಷಕರನ್ನು ಕೇಳಿದಾಗ ತಮಗೆ ಗೊತ್ತಿಲ್ಲ ಎಂದು ಹೇಳಿದ್ದು ಕೇಳಿ ವಿಷಾದವೆನಿಸಿತು. ಪುಣ್ಯಕೋಟಿಯ ಕಥೆಯನ್ನು ಬಾಲ್ಯದಲ್ಲಿ ಒಮ್ಮೆಯಾದರೂ ಕೇಳಿರಬಹುದೆಂಬ ವಿಷಯ ಹುಸಿಯಾಯಿತು. ಛೋಟಾ ಭೀಮ್, ಟಾಮ್ ಅಂಡ್ ಜೆರ್ರಿಯಂತಹ ಕಾರ್ಟೂನ್‌ಗಳ ಬಗೆಗಿರುವ ಮಕ್ಕಳ ಆಸಕ್ತಿಯನ್ನು ಇಂತಹ ನೀತಿಯುತವಾದ ಹಾಡಿನ ಕುರಿತೂ ಮೂಡಿಸುವುದು ಅವಶ್ಯಕವೆನಿಸಿತು.

–ವಿಭಾ ಮುರಳೀಧರ್, ತುಮಕೂರು

## ಭವಿಷ್ಯದ ಭವ್ಯ ಪ್ರಜೆಗಳು

ವಿಧಾನಸಭೆ ಚುನಾವಣಾ ಫಲಿತಾಂಶದ ನಂತರದ ದಿನಗಳಲ್ಲಿ ಟಿವಿ–9 ಸುದ್ದಿ ಮಾಧ್ಯಮದವರು ಒಂದು ರಾಜಕೀಯ ರಿಯಾಲಿಟಿ ಷೋ ನಡೆಸಿದರು. ಕಾಲೇಜು ಕ್ಯಾಂಪಸ್‌ನಲ್ಲಿ ಮತ್ತು ರಸ್ತೆಯಲ್ಲಿ ಓಡಾಡುತ್ತಿದ್ದ 18 ವರ್ಷಗಳನ್ನು ಮೀರಿದ ಸುಶಿಕ್ಷಿತ ಯುವಕ– ಯುವತಿಯರಿಗೆ ರಾಜಕೀಯದ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ಅವರಿಂದ ಬಂದ ಉತ್ತರಗಳು ಹೀಗಿವೆ.

ಪ್ರ: ನಮ್ಮ ರಾಜ್ಯದ ಸಿ.ಎಂ. ಯಾರು?

ಉ: ಸಿ.ಎಂ. ಅಂದರೆ..?

ಪ್ರ: ಮುಖ್ಯಮಂತ್ರಿಗಳು

ಉ: ಓ ಅವರಾ.. ನರೇಂದ್ರ ಮೋದಿ.

ಮತ್ತೊಬ್ಬಳು ವಿದ್ಯಾರ್ಥಿನಿ ಕೊಟ್ಟ ಉತ್ತರ ನಮ್ಮ ಸಿ.ಎಂ. 'ಎಡ್ಯೂರಪ್ಪ'. ಮತ್ತೊಬ್ಬಳು ಉತ್ತರ ಗೊತ್ತಿಲ್ಲದೆ ಮುಖ ಕಿವುಚುತ್ತಾ 'ಸಿದ್ಧರಾಮಯ್ಯ' ಅಂದಳು. ಮತ್ತೆ ಕೆಲವರು 'ಗೊತ್ತಿಲ್ಲ' ಎಂದು ತಪ್ಪಿಸಿಕೊಂಡರು.

ಇವರೇ ನಮ್ಮ ಭಾರತದ ಭವಿಷ್ಯದ ಭವ್ಯ ಪ್ರಜೆಗಳು! 18 ದಾಟಿದ, ಮತದಾನದ ಹಕ್ಕನ್ನು ಹೊಂದಿದವರು. ಮೊನ್ನೆ ಮೊನ್ನೆ ಚುನಾಯಿತರಾದ ಮುಖ್ಯಮಂತ್ರಿಗಳ ವಿಷಯವೇ ಗೊತ್ತಿಲ್ಲವೆಂದರೆ ಇನ್ನು ಇವರಿಗೆ ಗೊತ್ತಿರುವ ವಿಷಯವಾದರೂ ಯಾವುದು? ಬೆಳಗಿನಿಂದ ಸಂಜೆಯವರೆಗೆ ಮೊಬೈಲ್‌ನಲ್ಲೇ ಇದ್ದರೆ ಸಾಮಾನ್ಯ ಜ್ಞಾನ ವೃದ್ಧಿಸುವುದಾದರೂ ಹೇಗೆ?

–ಪುಷ್ಪಾ ಎನ್.ಕೆ. ರಾವ್, ಉಡುಪಿ

## ಬೌದ್ಧಿಕ ದಿವಾಳಿತನ?

ಕನ್ನಡ ಧಾರಾವಾಹಿಗಳಲ್ಲಿ ಇಬ್ಬರು ಹೆಂಡಿರು ಇಲ್ಲವೇ ಇಬ್ಬರು ಗಂಡಂದಿರಿರಲೇಬೇಕೇ? ಇನ್ನು ಅಪಹರಣಗಳು, ಕೊಲೆ ಬೆದರಿಕೆಗಳಂತೂ ಧಾರಾವಾಹಿಗಳಲ್ಲಿ ಅತಿ ಸಾಮಾನ್ಯ ಎನ್ನುವಂತಾಗಿದೆ. ಹೊರಗಿನವರು ಯಾರಾದರೂ ಮನೆಯಲ್ಲಿದ್ದರೆ (ಅತ್ತೆ, ಮಾವ, ಅಜ್ಜಿ ಇತ್ಯಾದಿ) ಅವರು ಭಯಂಕರ ಖಳನಾಯಕ/ ನಾಯಕಿ ಆಗಿರಲೇಬೇಕು . ನಮ್ಮ ಪುಟ್ಟಗೌರಿಯಂತೂ ಡೈವೋರ್ಸ್ ಆಗಿದ್ದರೂ ನ್ಯಾಯಬದ್ಧವಾಗಿ ಇನ್ನೊಂದು ಮದುವೆಯಾಗಿರುವ ಗಂಡನ ಮೇಲೆ ಆಸೆ ಬಿಟ್ಟಿಲ್ಲ. ಕೊಲೆ ಮಾಡಿ ಹೆಣ ಬಚ್ಚಿಟ್ಟು ಅತ್ಯಂತ ಹೀನ ಅಪರಾಧವನ್ನೇ ಮಾಡಿದರೂ ಅವರ ಮನೆಯವರಿಗೆ ಯಾವುದೇ ಶಿಕ್ಷೆಯಿಲ್ಲವಷ್ಟೇ! ಆದರೆ ಅಪರಾಧ ಪತ್ತೆ ಮಾಡುವ ಯತ್ನದಲ್ಲಿ ಸ್ವಲ್ಪ ಅತಿರೇಕ ಮಾಡುವ ಪೊಲೀಸರಿಗೆ ಶಿಕ್ಷೆ! ಇದೆಂಥ ನ್ಯಾಯ ಸ್ವಾಮಿ? ಕನ್ನಡ ಧಾರಾವಾಹಿಗಳ ನಿರ್ದೇಶಕರಿಗೇಕೆ ಈ ಬೌದ್ಧಿಕ ದಿವಾಳಿತನ?

–ಎಂ.ಜಿ. ಶ್ರೀನಾಥ್, ಮೈಸೂರು

## ಇದು ಅಗ್ನಿ ಸಾಕ್ಷಿ!

ಗಂಡಸರಿಗೆ ಸತ್ಯ ಗೊತ್ತಿಲ್ಲ!
ಹೆಂಗಸರಿಗೆ ಸತ್ಯ ಗೊತ್ತು
ಆದರೆ....
ಸತ್ಯ ಹೇಳುವ ಧೈರ್ಯವಿಲ್ಲ!
ಮಗುವಿಗೆ ಸತ್ಯ ಹೇಳುವ ಮನಸ್ಸಿದೆ
ಆದರೇನು ಮಾಡುವುದು?
ಅದಕ್ಕೆ ಮಾತು ಬರುವುದಿಲ್ಲ....!
ಇದೇ ಅಗ್ನಿ ಸಾಕ್ಷಿ.....

-ಪಿ.ಜೆ.ರಾಘವೇಂದ್ರ, ಮೈಸೂರು